doc-602
T-P-2

Reg No B G 155 7 12 72

In The State First Golden Jubilee Celebrated Paper 'Satyavadi' daily, Mysore 4

ರಾಷ್ಟ್ರದಲ್ಲಿ ಪ್ರಥಮ
ಸ್ವತಂತ್ರ
ಮಹೋತ್ಸವ
ಸಂದರ್ಭದಲ್ಲಿ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ತಮಿಳುನಾಡಿನಲ್ಲಿ ಮಳೆ ಹಾವಳಿಯಿಂದ 4 ಜನರ ಮರಣ

ಪೋಲೀಸರ ಪ್ರಶಂಸೆ

ಬೆಂಗಳೂರು— ಆಕ್ಟೋಬರಿನ ಎರಡನೇ ಪಕ್ಷದಲ್ಲಿ ಬೆಂಗಳೂರಿನಲ್ಲಿನ ಕೋಮು ವಾರು ಪರಿಸ್ಥಿತಿ ಬಹು ತೀವ್ರವಾಗಿತ್ತೆಂದೂ, ಮುನಿರೆಡ್ಡಿಪಾಳ್ಯ ಮೆತ್ತಿತರ ಕಡೆ ಪೋಲೀಸರು ಸೂಕ್ತ ನ್ಯಾಯ ಪರಿಣಾಮಕಾರಿ ಕ್ರಮ ನಡೆಸಿದ್ದರಿಂದ, ಗಲಭೆ ಹೆಚ್ಚದೆ ನಗರದಲ್ಲಿ ಶಾಂತಿಭಂಗ ತಪ್ಪಿತೆಂದೂ, ಪೋಲೀಸರ ಕಾರ್ಯವನ್ನು ಶಾಸನಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಪ್ರಶಂಸಿಸಿದರು.

ಜಪಾನಿನಲ್ಲಿ ಆಯುಸ್ಸು

ಜಪಾನಿನಲ್ಲಿ ಸರಾಸರಿ ಜೀವಿತ ಕಾಲವು ಗಂಡಸರಿಗೆ 70.17 ವರ್ಷಗಳಿಗೂ, ಹೆಂಗಸರಿಗೆ 75.58 ವರ್ಷಗಳಿಗೂ ಹೆಚ್ಚಿದೆ ಎಂದು ಜಪಾನಿನ ಆರೋಗ್ಯ ಮತ್ತು ಕಲ್ಯಾಣ ಸಚಿವಾಲಯ ಪ್ರಕಟಿಸಿದೆ ; ಅಂದರೆ ವಿಶ್ವದಲ್ಲಿ ಗಂಡಸರು 70 ವರ್ಷಗಳಿಗಿಂತಲೂ ಮತ್ತು ಹೆಂಗಸರು 75 ವರ್ಷಗಳಿಗಿಂತಲೂ ಹೆಚ್ಚು ಕಾಲ ಜೀವಿಸುವ ಸ್ವೀಡ್ಸ್, ನಾರ್ವೆ, ಡೆನ್ಮಾರ್ಕ್, ನೆದರ್ಲಾಂಡ್ ಗುಂಪಿಗೆ ಜಪಾನು ಸೇರಿದಂತಾಯ್ತು.

ಪೋಲೀಸು ಅಧಿಕಾರಿಯ ಕ್ಷಮಾಪಣೆ

ಮಡಕೇರಿ— ಹುತ್ರೀ ಹಬ್ಬದಂದು ಓಂಕಾರೇಶ್ವರ ದೇವಸ್ಥಾನದಲ್ಲಿ ಸೇರಿದ್ದ ಶಾಂತಿಯುತ ಗುಂಪಿನ ಮೇಲೆ ಲಾಠಿ ಭಾರ್ಜು ಮಾಡಿದ ಟೌನ್ ಪೋಲೀಸು ಸ್ಟೇಷನ್ನಿನ ಶ್ರೀ ವಿನ್ಸೆಂಟ್ ಕಾರ್ವಾಲೊ ಬೇಷರತ್ ಕ್ಷಮಾಪಣೆ ಅರ್ಪಿಸಿರುವರು.

— —

ನಿಧನ

ಮೈಸೂರು— ಶ್ರೀ ಪರಕಾಲ ಮಠದ 78 ವರ್ಷದ ದೊಡ್ಡ ಸ್ವಾಮಿಯವರು ನಿನ್ನೆ ಬೆಳಿಗ್ಗೆ ಸ್ವರ್ಗಸ್ಥರಾದರು.

★

ಸಭಾ ಪರಿತ್ಯಾಗ

ಬೆಂಗಳೂರು— ತಮಿಳ್ನಾಡಿನಲ್ಲಿ ಯಾರಾದರೊಬ್ಬರನ್ನು ರಾಜ್ಯದ ಅಭಾವ ಪೀಡಿತ ಭಾಗಗಳಲ್ಲಿ ಪ್ರವಾಸ ಮಾಡಲು ಕಳುಹಿಸಬೇಕೆಂಬ ವಿಧಾನ ಪರಿಷತ್ತಿನ ಸದಸ್ಯರ ಕೇಳಿಕೆಗೆ ಸರಕಾರ ಅನುಮತಿಸಲಿಲ್ಲವಾಗಿ ವಿಧಾನ ಪರಿಷತ್ತಿನಲ್ಲಿಯ ವಿರೋದಸದಸ್ಯರೆಲ್ಲರೂ ಸಭಾಪರಿತ್ಯಾಗ ಮಾಡಿದರು.

★

ದಿವ್ಯವಾಣಿ

ಸ್ವತಃ ಶ್ರದ್ಧೆಯಿಂದ ಶ್ರಮಿಸುವ ಮಾನವನಿಗೆ ದೇವರು ಸಹಾಯದ ಹಸ್ತ ನೀಡುತ್ತಾನೆ. — ಎಸ್ಟಿಲಸ್

ಧಾಕೊ ಚೌಕ್ ಮೇಲೆ ಹಕ್ಕು ಬಿಡುವದಿಲ್ಲ

ನವದೆಹಲಿ— ಡಿಸೆಂಬರು ಯುದ್ಧ ಕಾಲದಿಂದ ಪಾಕಿಸ್ತಾನದ ಆಕ್ರಮಣದಲ್ಲಿರುವ ಧಾಕೊ ಚೌಕ ಮೇಲೆ ಭಾರತವು ತನ್ನ ಹಕ್ಕನ್ನು ತ್ಯಜಿಸುವದಿಲ್ಲವೆಂದೂ, ಆ ಮೂಲಕವೇ ಗುರುತು ಹಾಕುವ ಕಾರ್ಯ ಮುಗಿದ ನಂತರ, ಪಾಕ್ ಸೈನ್ಯ ವಾಪಸ್ಸಾಗಬೇಕೆಂದೂ ಹೇಳಲಾಗಿದೆ.

★

ಜಯಲಲಿತ ಪ್ರಕರಣ

ಬೆಂಗಳೂರು— ದಸರಾ ಸಾಂಸ್ಕೃತಿಕ ಉತ್ಸವ ಸಂಬಂಧದಲ್ಲಿ ಪೋಲೀಸು ದಬ್ಬಾಳಿಕೆ ಮತ್ತು ತಾರೆ ಜಯಲಲಿತರ ಸಂಬಂಧದ ವಿಷಯದ ಆಪಾದನೆಗಳನ್ನು ತಾವು ಪರಿಶೀಲಿಸುವುದಾಗಿ ಮುಖ್ಯ ಮಂತ್ರಿಗಳು ಶಾಸನಸಭೆಯಲ್ಲಿ ತಿಳಿಸಿದರು.

●

ಮಳೆ ಹಾವಳಿ

ಮದರಾಸು— 3 ದಿನಗಳಿಂದ ತೀರ ಜಿಲ್ಲೆಗಳಲ್ಲಿ ಮಳೆ ಹಾವಳಿಯಿಂದ 4 ಮಂದಿ ಸತ್ತಿರುವರು.

○

ತಡೆ ಆಜ್ಞೆ

ಮದರಾಸು— ಶಾಸನಸಭಾ ಸ್ಪೀಕರ್ ಮಥಾಯಲಿಗನ್ನರ ಆರ್ಜಿ ಅಡ್ಮಿಟ್ ಆಗಿ ಹೈ ಕೋರ್ಟು ತಡೆ ಆಜ್ಞೆ ಇತ್ತಿದೆ.

●

ಮೇವು ಸರಬರಾಜು

ಚಿಕ್ಕಮಗಳೂರು— ರಾಜ್ಯದಲ್ಲಿ ಅನಾವೃಷ್ಟಿ ಪೀಡಿತ ಭಾಗಗಳಿಗೆ 1000 ಟ್ರಕ್ ತುಂಬ ಮೇವು ಕಳುಹಿಸುವುದಾಗಿ ಜಿಲ್ಲಾಧಿಕಾರಿಗಳಾದ ಶ್ರೀ ಚಿತ್ತರಂಜನದಾಸ್ ರವರು ಹೇಳಿದರು — ಬಡವರು ಗುಡಿಸಲು ಹಾಕಿಕೊಳ್ಳಲು ಬೊಂಬುಗಳನ್ನೂ ಕಳುಹಿಸಲಾಗುವುದೆಂದಿರುವರು.

ನಿರ್ಧಾರದ ಸಮರ್ಥನೆ

ಬೆಂಗಳೂರು— ಭತ್ತ ಮತ್ತು ಅಕ್ಕಿ ಸಗಟು ವಾಪಾರವನ್ನು ಸರಕಾರ ವಹಿಸಿಕೊಳ್ಳುವುದನ್ನು ಮುಂದಕ್ಕೆ ಹಾಕಿರುವುದನ್ನು ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಶಾಸನಸಭೆಯಲ್ಲಿ ಸಮರ್ಥಿಸಿದರು.

●

ಗೋಧಿ ಮತ್ತು ಅಕ್ಕಿ

ನವದೆಹಲಿ— ಗೋಧಿ ಮತ್ತು ಅಕ್ಕಿ ವಿಷಯದಲ್ಲಿ ತಡೆಯಿಲ್ಲದ ವ್ಯಾಪಾರವನ್ನು ಮುಕ್ತಾಯಗೊಳಿಸಲು ಸರಕಾರದ ನೀತಿಯೆಂದು ರಾಜ್ಯಸಭೆಯಲ್ಲಿ ತಿಳಿಸಲಾಯ್ತು.

★

ಟೆಸ್ಟ್ ಆಟಗಾರರಿಗೆ ಸಂಭಾವನೆ ಹೆಚ್ಚಿತು

ಜಯಪುರ— ಕ್ರಿಕೆಟ್ ಟೆಸ್ಟ್ ಆಟಗಾರರಿಗೆ ಪ್ರತಿ ಟೆಸ್ಟ್‌ಗೆ ಕೊಡಲಾಗುತ್ತಿರುವ ರೂ. 1000 ಸಂಭಾವನೆಯನ್ನು ರೂ. 2000 ಕ್ಕೆ ಹೆಚ್ಚಿಸಲಾಗಿದೆಯೆಂದು ಕ್ರಿಕೆಟ್ ಕಂಟ್ರೋಲ್ ಬೋರ್ಡ್ ಅಧ್ಯಕ್ಷರು ಹೇಳಿರುವರು.

★

ಭಿಕ್ಷುಕರಿಗೆ ಸಂತತಿಹರಣ ಚಿಕಿತ್ಸೆ !

ನವದೆಹಲಿ— ಭಿಕ್ಷುಕರು ಹೆಚ್ಚಿದಿರಲು ಭಿಕ್ಷುಕರಿಗೆ ಬಲಾತ್ಕಾರ ಸಂತತಿಹರಣ ಚಿಕಿತ್ಸೆ ನಡೆಸಬೇಕೆಂಬ ಸಲಹೆಯು ರಾಜ್ಯಸಭೆಯಲ್ಲಿ ತಿರಸ್ಕರಿಸಲ್ಪಟ್ಟಿತು.

●

ಶಂಕವತಿ ಸಮಸ್ಯೆ

ಬೆಂಗಳೂರು— ಶಂಕವತಿ ಸಂಬಂಧದಲ್ಲಿ ನ್ಯಾಯಾಂಗ ವಿಚಾರಣೆ ನಡೆಸುವ ವಿಷಯವು ಸರಕಾರದ ಪರ್ಯಾಲೋಚನೆಯಲ್ಲಿದೆಯೆಂದು ಶಾಸನಸಭೆಯಲ್ಲಿ ತಿಳಿಸಲಾತು.

○ ನವದೆಹಲಿ— ಭಾರತವು ಟಿನ್ಸೀನಿಯಾಕ್ಕೆ ರೂ. 5 ಕೋಟಿ ಸಾಲ ನೀಡಿದೆ.

ವುಡ್‌ಲಾಂಡ್ಸ್ 1 12 72 ರಿಂದ ಅನೋಘ ಪ್ರಾರಂಭ

ಆಲ್ ಇಂಡಿಯಾ ಪಿಕ್ಚರ್ಸ್‌ರವರ
ಹಿಂದಿ ಕಲರ್ ಅತ್ಯಮೋಘ ಚಿತ್ರ

ದಿಲ್ ದೌಲತ್ ದುನಿಯಾ

ಪಾತ್ರ – ರಾಜೇಶ್ ಖನ್ನ, ಸಾಧನ, ಅಶೋಕ ಕುಮಾರ್, ಹೆಲೆ,
ಓಂ ಪ್ರಕಾಶ್ ಸಂಗೀತ : ಶಂಕರ್ ಜೈಕಿಷನ್ ದಿನ 3 ಪ್ರದರ್ಶನಗಳು

ಅ ಪೆ ರಾ 8 12 72 ರಿಂದ

ಅತ್ಯಮೋಘ ಹಿಂದಿ ಕಲರ್ ಚಿತ್ರ

ಗಾಂವ್ ಹಮಾರ ಪೆಹರ್ ತುಮಾರ

ಪಾತ್ರ : ರಾಜೇಂದ್ರ ಕುಮಾರ್ ರೇಖ ಸುಜಿತ ಕುಮಾರ್ ಲಲಿತಪವಾರ್
ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್ ದಿನ 3 ಪ್ರದರ್ಶನಗಳು



Protect the Cow

Help The Gorakshana

— Humanitarian Propoganda Monthly....

Edited Printedand Published by Dharmapracharanirata M S Krishna Rao (Propretor) at the Satvavad Press, Chamarajapuram Mysore

18 ಎಕರೆ ಮಿತಿಗೆ ಕರೆ

ರೈತ ಮತ್ತು ಕಾರ್ಮಿಕ ಸೇವಾ ಸಂಘದ ಅಧ್ಯಕ್ಷರಾದ ಶ್ರೀ ಕೆ ಪಿ ಜಂಬೂಗೌಡರು ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಎಂ ಕೆ ಮುಕುಂದರಾವ್‌ರವರು ಈ ರೀತಿ ತಿಳಿಸುತ್ತಾರೆ — ಭೂ ಸುಧಾರಣೆ ತಿದ್ದುಪಡಿ ಮಸೂದೆ ಮೈಸೂರು ರಾಜ್ಯ ವಿಧಾನ ಸಭೆಯ ಈ ಅಧಿವೇಶನದಲ್ಲಿ ಚರ್ಚೆ ಆಗಲಿದೆ ಇದೇ ಸಮಯದಲ್ಲಿ ಬೆಂಗಳೂರಿನಲ್ಲಿ ಶ್ರೀ ಹೆಚ್ ಕೆ ವೀರಣ್ಣಗೌಡರ ನೇತೃತ್ವದಲ್ಲಿ ರೈತರ ಬೃಹತ್ ಸಂಮೇಳನ ನಡೆಯಲಿದೆ ಭೂಮಿತಿ 18 ಸ್ಟ್ಯಾಂಡರ್ಡ್ ಎಕರೆ ಇರಬೇಕು, ಸಣ್ಣ ಹಿಡುವಳಿದಾರರು ಭೂಮಿ ಗುತ್ತಿಗೆ ಕೊಡಲು ಅವಕಾಶ ಇರಬೇಕು ಮತ್ತು ವಶಪಡಿಸಿಕೊಂಡ ಭೂಮಿಗೆ ಪೇಟೆ ಧಾರಣೆ ಇತ್ತು, ಹಣವನ್ನು ಕೊಡುವ ವರೆಗೆ ದಕ್ಷಿಣ ವಿಯಟ್ನಾಂ ದೇಶದಲ್ಲಿ ಕೊಡುತ್ತಿರುವಂತೆ ಶೇಕಡ 10 ರಂತೆ ಬಡ್ಡಿ ಕೊಡಬೇಕೆಂದು ನಾವು ಒತ್ತಾಯ ಮಾಡುತ್ತೇವೆ. ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರು " ಗರೀಬಿ ಹಟಾವೋ " ಮಾಡಲು ಸಾಧ್ಯವಾಗದಿರುವುದನ್ನು ಗಮನಿಸಿ ಕ್ರಮ ಕೈಗೊಳ್ಳಬೇಕೆಂದು ಮೈಸೂರು ಸರಕಾರ ಮತ್ತು ರೈತ ಸಮ್ಮೇಳನವನ್ನು ನಾವು ಒತ್ತಾಯಿಸುತ್ತೇವೆ.

ಭಾರತದಲ್ಲಿ ಗೋವಧೆ ಪೂರ್ಣ ನಿಶೇಧವಾಗಲಿ

ಧ್ವಜ ದಿನಾಚರಣೆ 7ನೇ ಡಿಸೆಂಬರ್

.... ಆಚರಿಸಲಾಗುತ್ತದೆ ....

ಅಂದು 25 ಪೈಸೆ ಮೌಲ್ಯದ ಸಾಂಕೇತಿಕ ಧ್ವಜ ಹಾಗೂ ರೂ. 2 ಮೌಲ್ಯದ ಧ್ವಜಗಳನ್ನು ಮಾರಲಾಗುತ್ತದೆ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿಗಳಿಗೆ ಇವನ್ನು 5 ಪೈಸೆಗೂ, ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ 10 ಪೈಸೆಗೂ ಮಾರಲಾಗುವುದು

ಅಂದು ಧ್ವಜವನ್ನು ಕೊಂಡು, ಧ್ವಜ ದಿನಾಚರಣೆ ನಿಧಿಗೆ ಕಾಣಿಕೆ ಸಲ್ಲಿಸಬೇಕೆಂದು ರಾಜ್ಯ ಸರಕಾರ ಸಾರ್ವಜನಿಕರಲ್ಲಿ ವಿನಂತಿಸಿಕೊಂಡಿದೆ. ಈ ನಿಧಿಯನ್ನು ರಕ್ಷಣಾ ದಳಗಳ ಸಿಬ್ಬಂದಿಯ ಕಲ್ಯಾಣಕ್ಕಾಗಿ ಉಪಯೋಗಿಸಲಾಗುತ್ತದೆ.

SHAKTI SUDHA

A Superb Tonic

Quality Printing Neat Binding

Lakshminarasimha Press

Sivarampet, Mysore